ದಿನಾಂಕ 25-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಎಸ್.ಹೆಚ್ ವಕೀಲರಿಂದಃ**

1. ಈ ದಾವೆಯನ್ನು ಉಮೇಶ ತಳವಾರ, ಆತನ ಹೆಂಡತಿ ಹಾಗೂ ತಮ್ಮನ ಮೇಲೆ ಸಲ್ಲಿಸಿದ್ದೇನೆ. ಈ ದಾವೆಯಲ್ಲಿ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಹಾಕಿರುವ ಶೆಡ್ಡನ್ನು ತೆಗೆದು ಹಾಕಿ ವಹಿವಾಟಿಗೆ ತೊಂದರೆ ಮಾಡಬಾರದು ಎಂದು ಪರಿಹಾರವನ್ನು ಕೋರಿರುತ್ತೇನೆ. ಈ ದಾವೆಯಲ್ಲಿ ಶೆಡ್ಡನ್ನು ತೆಗೆದು ಕಬ್ಜೆಯನ್ನು ಕೋರಿ ದಾವೆಯನ್ನು ಸಲ್ಲಿಸಿದ್ದೇನೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು 2017 ರಲ್ಲಿ ಶೆಡ್ಡನ್ನು ನಿರ್ಮಿಸಿರುತ್ತಾರೆ. ದಾವಾ ಆಸ್ತಿಯಲ್ಲಿ ನಿರ್ಮಿಸಿರುವ ಶೆಡ್ಡನ್ನು ತೆಗೆದು ಖಾಲಿ ಜಾಗವನ್ನು ನನಗೆ ನಿಡುವಂತೆ ನೋಟೀಸನ್ನು ಪ್ರತಿವಾದಿಗಳಿಗೆ ನೀಡಿರುವುದಿಲ್ಲ. ಆದರೆ ಗ್ರಾಮದಲ್ಲಿ ಪಂಚರ ಮೂಲಕ ಹೇಳಿಸಿರುತ್ತೇನೆ ಎಂದು ನುಡಿಯುತ್ತಾರೆ.

2. ದಾವಾ ಆಸ್ತಿಯು ಜಮೀನು ಆಗಿದ್ದು ಅದರ ಸ ನಂಃ 175/5 ಆಗಿರುತ್ತದೆ. ಈ ದಾವೆಯನ್ನು ಸ ನಂಃ 175/5 ರ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿದ್ದೇನೆ. ಈ ದಾವೆಯನ್ನು ಎರಡೂ ಶೆಡ್ಯೂಲ್ ಗಳನ್ನಾಗಿ ಮಾಡಿ ಸಲ್ಲಿಸಿರುವುದಿಲ್ಲ. ದಾವಾ ಆಸ್ತಿಯ ಪೂ- ಹನುಮಂತಪ್ಪ ಹಂಸಬಾವಿ ರವರ ಆಸ್ತಿ, ಪ- ಕುರುವತ್ತೆಪ್ಪ ಅಂಬಿಗೇರ ರವರ ಆಸ್ತಿ ಉ- ಪಿಡಬ್ಲ್ಯೂಡಿ ರಸ್ತೆ, ದ- ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 14 ಗುಂಟೆ ಪೈಕಿ ಉಳಿದ ಭಾಗ. ಪ್ರತಿವಾದಿಯರು ಅನಧಿಕೃತವಾಗಿ ನಿರ್ಮಿಸಿದ್ದಾರೆ ಎಂದು ಹೇಳಲಾದ ಶೆಡ್ಡಿನ ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣದ ನಾಲ್ಕು ದಿಕ್ಕುಗಳಿಗೂ ನನಗೆ ಸೇರಿದ ಖುಲ್ಲಾ ಜಾಗ ಇದೆ. ಈ ದಾವೆಯನ್ನು 3 ಗುಂಟೆಗೆ ಸಂಬಂಧಿಸಿದಂತೆ ಸಲ್ಲಿಸಿದ್ದೇನೆ. 3 ಗುಂಟೆ ಜಮೀನಿನ ಸ್ವಲ್ಪ ಭಾಗದಲ್ಲಿ ಪ್ರತಿವಾದಿಗಳು ಶೆಡ್ಡನ್ನು ನಿರ್ಮಿಸಿರುತ್ತಾರೆ.

3. ದಾವಾ ಆಸ್ತಿಯ ಪೂ-ಪ ಉತ್ತರಕ್ಕೆ 52 ಅಡಿ, ಪೂ-ಪ- ದಕ್ಷಿಣಕ್ಕೆ 52 ಅಡಿ, ಉ-ದ ಪೂರ್ವಕ್ಕೆ 62 ಅಡಿ, ಉ-ದ ಪಶ್ಚಿಮಕ್ಕೆ 80 ಅಡಿ ವಿಸ್ತೀರ್ಣ ಇದೆ. ದಾವಾ ಶೆಡ್ಯೂಲ್ 3 ಗುಂಟೆಗೆ ಸಂಬಂಧಿಸಿದಂತೆ ನಾನು ಮೇಲೆ ಹೇಳಿದ ವಿಸ್ತೀರ್ಣಕ್ಕೆ ಪ್ರತ್ಯೇಕ ದಾಖಲೆಗಳು ಇಲ್ಲ. ಸಾಕ್ಷಿ ಮುಂದುವರೆದು ನಾನು ಖರೀದಿಸಿದ ಒಟ್ಟು 14 ಗುಂಟೆ ಜಮೀನಿಗೆ ಕ್ರಯ ಪತ್ರದಲ್ಲಿ ಅಳತೆ ಇದೆ ಎಂದು ನುಡಿಯುತ್ತಾರೆ. ನಾನು ಹೇಳುವ ಖರೀದಿ ಪತ್ರದಲ್ಲಿ ಅಳತೆಗಳು ಇಲ್ಲ ಎಂದರೆ ಸಾಕ್ಷಿಯು ಚಕ್ಕುಬಂದಿ ಇದೆ ಎಂದು ನುಡಿಯುತ್ತಾರೆ.

4. ದಾವಾ ಆಸ್ತಿಯು ಮೂಲತಃ ಕುರುವತ್ತೆಪ್ಪ ತಂದೆ ಬಸವಂತಪ್ಪ ಅಂಬೀಗೇರ ರವರ ಮಾಲಿಕತ್ವದ ಆಸ್ತಿ ಆಗಿತ್ತು. ಸ ನಂಃ 175/4 ರಲ್ಲಿ ಇರುವ 2 ಎಕರೆ 16 ಗುಂಟೆ ಜಮೀನು ಸಂಪೂರ್ಣ ಆತನ ಮಾಲಿಕತ್ವಕ್ಕೆ ಸೇರಿದ ಜಮೀನಾಗಿತ್ತು. ಒಟ್ಟು ವಿಸ್ತೀರ್ಣ 2 ಎಕರೆ 16 ಗುಂಟೆ ಪೈಕಿ ನನಗೆ 14 ಗುಂಟೆ ಸೇರಿದಂತೆ ಇತರರಿಗೂ ಒಂದೇ ಖರೀದಿ



ಪತ್ರದಲ್ಲಿ ಸದರಿ ಜಮೀನಿನ ಪೈಕಿ ಮಾರಾಟ ಮಾಡಿರುತ್ತಾರೆ. ಸದರಿ 14 ಗುಂಟೆಗೆ ನಾನು ಒಬ್ಬನೇ ಮಾಲೀಕನಲ್ಲ ಎಂದರೆ ಸಾಕ್ಷಿಯು ಸದ್ಯಕ್ಕೆ ನಾನೇ ಮಾಲೀಕನಿದ್ದು ಮುಂದೆ ಇತರ ಖರೀದಿದಾರರಿಗೂ ಬಿಟ್ಟು ಕೊಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ಒಟ್ಟು 14 ಗುಂಟೆ ಜಮೀನಿನ ಪೈಕಿ ಒಂದು ಭಾಗದಲ್ಲಿ 4 ಗುಂಟೆ ಮತ್ತು ಮತ್ತೊಂದು ಬಾಗದಲ್ಲಿ 2 ಗುಂಟೆ ಆಸ್ತಿಯು ನನಗೆ ಸೇರಿದ ಆಸ್ತಿಯಾಗಿರುತ್ತದೆ. ಸದರಿ 4 ಗುಂಟೆಯು ದಕ್ಷಿಣ ಭಾಗದಲ್ಲಿ ಬರುತ್ತದೆ. ಉಳಿಕೆ 2 ಗುಂಟೆ ಜಮೀನು ಉತ್ತರ ಭಾಗದಲ್ಲಿದೆ. ಈ ದಾವೆಯನ್ನು ಉತ್ತರ ಭಾಗದ ಜಮೀನಿಗೆ ಮಾಡಿರುತ್ತೇನೆ. ಉತ್ತರ ಭಾಗದ ಆಸ್ತಿಯಲ್ಲಿ ನನ್ನ 2 ಗುಂಟೆ ಮಾತ್ರ ಬರುತ್ತದೆ ಎಂದರೆ ಸರಿ.

5. ದಾವಾ ಆಸ್ತಿಯನ್ನು ದಿಃ 15-09-2015 ರಂದು ಖರೀದಿಸಿರುತ್ತೇನೆ. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಕ್ರಯದ ಕರಾರು ಪತ್ರ ಆಗಿತ್ತು. ಖರೀದಿ ಕರಾರು

ಪತ್ರ ಆದ 3 ವರ್ಷಕ್ಕೆ ಖರೀದಿ ಪತ್ರವನ್ನು ಬರೆಸಿಕೊಂಡಿರುತ್ತೇನೆ. ಕುರುವತ್ತೆಪ್ಪ ಅವರು ನನ್ನನ್ನು ಹೊರತುಪಡಿಸಿ ನನ್ನೊಂದಿಗೆ ಒಟ್ಟಿಗೆ ಖರೀದಿಸಿದ 3 ಜನರ ಪರವಾಗಿಯೂ ಖರೀದಿ ಕರಾರು ಪತ್ರ ಆಗಿತ್ತು. ಮುತ್ತವ್ವ, ಶಿರಸಂಗೆಮ್ಮ ಮತ್ತು ದಾವೂಲ್ ರವರು ಖರೀದಿ ಕರಾರು ಪತ್ರ ಬರೆಸಿಕೊಂಡ ವ್ಯಕ್ತಿಗಳಾಗಿರುತ್ತಾರೆ. ಕುರುವತ್ತೆಪ್ಪ ಅವರು ಸದರಿಯವರಿಗೆ ಪ್ರತ್ಯೇಕವಾಗಿಯೇ ಖರೀದಿ ಕರಾರು ಪತ್ರಗಳನ್ನು ಮಾಡಿಕೊಟ್ಟಿದ್ದು ಆದರೆ ಸದರಿ ಪ್ರತ್ಯೇಕ ಖರೀದಿ ಕರಾರು ಪತ್ರಗಳು ನಾನು ಖರೀದಿಸಿದ 14 ಗುಂಟೆಯ ಜಮೀನಿ ನಲ್ಲಿಯೇ ಅವರಿಗೂ ಭಾಗ ಭಾಗವಾದ ಜಮೀನುಗಳನ್ನು ಮಾರಾಟ ಮಾಡಿದ ನಂತರ ಬಿಟ್ಟು ಕೊಡುವಂತೆ ಕರಾರು ಆಗಿರುತ್ತದೆ.

6. ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಸ ನಂಃ 175 ರ ಜಮೀನಿಗೆ ಪೋಡಿಗಳು ಇರಲಿಲ್ಲ ಎಂದರೆ ಸರಿ. ಸ ನಂಃ 175 ರಲ್ಲಿ ಇರುವ ಒಟ್ಟು ಕ್ಷೇತ್ರ 2 ಎಕರೆ 16 ಗುಂಟೆ ಜಮೀನು ಎಷ್ಟು ಫೂಟು ಹಿಸ್ಸಾಗಳು ಆಗಿವೆ ಎಂದು ಗೊತ್ತಿಲ್ಲ.



ಈಗ ಸ ನಂಃ 175 ರ ಜಮೀನು ಒಟ್ಟು 5 ಪೋಡಿ ಹಿಸ್ಸೇಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ. ಸ ನಃ 175 ರ ಜಮೀನು 5 ಪೋಡಿ ಹಿಸ್ಸಾಗಳು ಆಗಿವೆ ಎಂದು ನಾನೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಗೊತ್ತಿಲ್ಲ. ನಾನು ಖರೀದಿ ಮಾಡಿದಾಗ ಅದರ ಸ ನಂಃ 175/4 ಎಂದು ಇತ್ತು. ನಾನು ಈ ದಾವೆಯನ್ನು 175/5 ರ ಜಮೀನಿಗೆ ಸಲ್ಲಿಸಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮತ್ತು ಇತರ 3 ಜನರು ಸ ನಂಃ 175/4 ರಲ್ಲಿ ಒಟ್ಟು 14 ಗುಂಟೆ ಜಮೀನನ್ನು ಖರೀದಿಸಿದ ನಂತರ ಸ ನಂಃ 175/5 ಆಗಿರುತ್ತದೆ ಎಂದು ನುಡಿಯುತ್ತಾರೆ.

7. ನಾನು ದಾವಾ ಆಸ್ತಿಯನ್ನು ಖರೀದಿಸುವ ಸಮಯಕ್ಕೆ ಸ ನಂಃ 175, ಐದು ಪೋಡಿ ಹಿಸ್ಸಾಗಳು ಆಗಿದ್ದವೋ ಇಲ್ಲವೋ ನನಗೆ ಗೊತ್ತಿಲ್ಲ. ಖರೀದಿ ಪತ್ರದಲ್ಲಿ ಸ ನಂಃ 175/4 ಎಂದು ನಮೂದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದವರೆದು ನಾನು

ಖರೀದಿಸುವಾಗ ಅದರ ಸ ನಂಃ 175/5 ಎಂದು ಹೇಳಿದ ಬಗ್ಗೆ ನೆನಪು ಇದ್ದು, ನನಗೆ ಓದಲು ಮತ್ತು ಬರೆಯಲು ಬರದೇ ಇರುವ ಕಾರಣದಿಂದ ಖರೀದಿ ಪತ್ರವನ್ನು ನೋಡಿಲ್ಲ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆಃಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ